

# ಮುಖಕಾಂತಿಗೆ ಕ್ಲೆನ್ಸಿಂಗ್, ಸ್ಕ್ರಬ್

ಮುಖದ ಸೌಂದರ್ಯ ಹೆಚ್ಚಿಸಿಕೊಳ್ಳಲು ಕ್ಲೆನ್ಸಿಂಗ್ ಮೊರೆಹೋಗುತ್ತಾರೆ ಹೆಂಗಳೆಯರು. ಬ್ಯೂಟಿ ಪಾರ್ಲರ್‌ಗಳಿಗೆ ಹೋಗಿ ದುಬಾರಿ ಹಣತೆತ್ತು ಕ್ಲೆನ್ಸಿಂಗ್ ಮಾಡಿಸಿಕೊಳ್ಳುತ್ತಾರೆ. ಕ್ಲೆನ್ಸಿಂಗ್‌ನಿಂದ ಮುಖದಲ್ಲಿರುವ ನಿರ್ಜೀವ ಕಣಗಳು ಹೋಗಿ ತ್ವಚೆ ಕಾಂತಿಯುಕ್ತವಾಗುತ್ತದೆ, ಕಪ್ಪುಕಲೆ, ಮೊಡವೆ, ಇತರ ಕಲೆಗಳು, ವೈಟ್ ಪ್ಯಾಚಸ್‌ಗಳು ಹೋಗಿ ಅಂದ ಹೆಚ್ಚುತ್ತದೆ. ಇದೀಗ ಹರ್ಬಲ್ ಕ್ಲೆನ್ಸಿಂಗ್ ಬಂದಿದ್ದು, ರಾಸಾಯನಿಕಮುಕ್ತವಾಗಿದೆ.

ಬ್ಯೂಟಿಷಿಯನ್ ನಾಲ್ಕು ಹಂತಗಳಲ್ಲಿ ಕಾರ್ಯ ಕೈಗೊಳ್ಳುತ್ತಾರೆ. ಅವೆಂದರೆ ಕ್ಲೆನ್ಸಿಂಗ್, ಸ್ಕ್ರಬ್, ಫೇಸ್ ಪ್ಯಾಕಿಂಗ್ ಮತ್ತು ಮೇಕಪ್.

ಮೊದಲನೆಯದಾದ ಕ್ಲೆನ್ಸಿಂಗ್ ಅನ್ನು ಪಾರ್ಲರ್‌ಗಳಲ್ಲಿ ಮಾಡಿಸಿಕೊಳ್ಳುವ ಬದಲು ಮನೆಯಲ್ಲಿಯೇ ತಯಾರಿಸಿಕೊಳ್ಳಬಹುದು. ಅಡುಗೆ ಮನೆಯಲ್ಲೇ ದೊರೆಯುವ ವಸ್ತುಗಳನ್ನು ಸೌಂದರ್ಯ ಸಾಧನವಾಗಿಸಬಹುದು. ಜೊತೆಗೆ ಹರ್ಬಲ್ ಕ್ಲೆನ್ಸಿಂಗ್ ಕೂಡ ಇದೀಗ ಜನಪ್ರಿಯವಾಗುತ್ತಿದೆ.

## ಏನಿದು ಕ್ಲೆನ್ಸಿಂಗ್?

ಮುಖವನ್ನು ಸ್ವಚ್ಛಗೊಳಿಸಿ ಹೊಳಪು, ಕಾಂತಿ ಉಂಟು ಮಾಡುವ ಸೌಂದರ್ಯ ಸಾಧನವೇ ಕ್ಲೆನ್ಸಿಂಗ್. ಮುಖ ಸೌಂದರ್ಯ ಹೆಚ್ಚಿಸಿಕೊಳ್ಳಲು



## ಬಾದಾಮಿ ಕ್ಲೆನ್ಸಿಂಗ್ ಕ್ರೀಮ್

ಬಾದಾಮಿ ಉತ್ತಮ ಸೌಂದರ್ಯವರ್ಧಕ. ಇದನ್ನು ಬಳಸಿ ಸೌಂದರ್ಯ ವೃದ್ಧಿಸಿಕೊಳ್ಳಬಹುದು. ಬಾದಾಮಿ ಕ್ಲೆನ್ಸಿಂಗ್ ಅನ್ನು ಹೀಗೆ ಮಾಡಿ...

ಕ್ಲೆನ್ಸಿಂಗ್‌ಗಳು ಮುಖದ ಅಂದ ಹೆಚ್ಚಿಸಲು ಸಹಕಾರಿ. ಮುಖದ ಮೇಲಿನ ಒರಟುತನ ಮಾಯವಾಗಿ ತ್ವಚೆ ಮೃದುವಾಗಿಸುತ್ತದೆ. ಉತ್ತಮ ಕಾಂತಿ ಬರುತ್ತದೆ. ಮನೆಯಲ್ಲೇ ಕ್ಲೆನ್ಸಿಂಗ್ ತಯಾರಿಸಿ ಅಂದ ಹೆಚ್ಚಿಸಿಕೊಳ್ಳಬಹುದು.

■ ಶಿವಲೀಲಾ ಸೊಪ್ಪಿಮಠ